ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.

ಸಿಸಿ ನಂಃ 894/2020

ಪಿ ಡಬ್ಲುಃ 01

ಸಿ ಡಬ್ಲುಃ 02

| | |
|---|---|
| ಸಾಕ್ಷಿದಾರರ ಹೆಸರು | ಪರಮೇಶ್ವರ ನಾಯ್ಕ |
| ತಂದೆಯ ಹೆಸರು | ಪಾಂಡುರಂಗ ನಾಯ್ಕ |
| ವಯಸ್ಸು | 49 |
| ಉದ್ಯೋಗ | ಬೀಡಾ ಅಂಗಡಿ |
| ವಾಸ್ತವ್ಯ | ಮಂಕಿ |

ಸಾಕ್ಷಿಯನ್ನು ದಿನಾಂಕಃ 05-07-2023 ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಸದ್ರಿ ದಾಖಲೆಯನ್ನು ನಿಪಿ. 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ. 1 ಎ ಎಂದು ಗುರುತಿಸಲಾಯಿತು. ಸದ್ರಿ ದಾಖಲೆಗೆ ನಾನು ಐದು ಆರು ವರ್ಷಗಳ ಹಿಂದೆ ಹೊನ್ನಾವರ ಬಸ್ ನಿಲ್ದಾಣದಲ್ಲಿ ಸಹಿ ಮಾಡಿರುತ್ತೇನೆ. ಆಗ ಸ್ಥಳಕ್ಕೆ ಪೋಲಿಸರು ಬಂದಿದ್ದು ನನ್ನ ಜೊತೆ ಚಾಸಾ 3 ರವರು ಸಹಾ ಹಾಜರಿದ್ದರು. ನಾನು ಯಾವದೋ ಊರಿಗೆ ಹೋಗಲು ಬಸ್‌ಗಾಗಿ ಕಾಯುತ್ತಿದ್ದಾಗ ಪೋಲಿಸರು ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಕಡತದಲ್ಲಿರುವ ಬಿಳಿ ಹಾಳೆಯಲಿ ಪ್ರಿಂಟ್ ತೆಗೆದಿರುವ ಪೋಟೋಗಳನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸುತ್ತಾರೆ. ಸದರಿ ಪೋಟೊಗಳನ್ನು ಹಾಳೆಯಲ್ಲಿ ಪ್ರಿಂಟ್ ತೆಗೆದ ಕಾರಣ ಅದನ್ನು ಗುರುತಿಸಲು ನ್ಯಾಯಾಲಯ ನಿರಾಕರಿಸಿರುತ್ತದೆ. ಸದ್ರಿ ಮಹಜರಿನಲ್ಲಿ ಏನು ಬರೆದಿರುತ್ತಾರೆ ಮತ್ತು ಯಾವ ಕಾರಣಕ್ಕಾಗಿ ನನ್ನ ಸಹಿ ಪಡೆದ್ದಾರೆ ಗೊತ್ತಿಲ್ಲ. ಘಟನಾ ಸ್ಥಳವನ್ನು ಯಾರು ತೋರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ವಸ್ತುಗಳನ್ನು ಮತ್ತು ಯಾವದೇ ವಾಹನಗಳನ್ನು ವಶಪಡಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲುಃ ಎ ಪಿ ಪಿ ಯವರಿಂದಃ</u>**

ದಿಃ 07.12.2017 ರಂದು ಹೊನ್ನಾವರ ಪಟ್ಟಣದ ಗುಡ್ ಲಕ್ ಹೊಟೆಲ್ ಎದುರುಗಡೆ ಪೊಲೀಸರು ಸ್ಥಳ ಪಂಚನಾಮೆಗಾಗಿ ಬಂದಾಗ ನಾನು ಸದ್ರಿ ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆಗ ಚಾಸಾ 1 ರವರು ಪೋಲಿಸರಿಗೆ ಘಟನಾ ಸ್ಥಳ ತೋರಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಸ್ಥಳದಿಂದ ಪೋಲಿಸರು 10 ಕಲ್ಲುಗಳು, 5 ಬಾಟಲಿಗಳು, 5 ಕಬ್ಬಿಣದ ರಾಡುಗಳು, 10 ಕಟ್ಟಿಗೆ ಬಡಿಗೆಗಳನ್ನು ಪೋಲಿಸರು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಪೋಲಿಸರು ಅನೇಕ ಬೈಕುಗಳನ್ನು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ತನಿಖೆ ಸಲುವಾಗಿ ಅವೆಲ್ಲ ವಸ್ತುಗಳನ್ನು ನನ್ನ ಮತ್ತು ಚಾಸಾ 3 ರವರ ಸಮಕ್ಷಮ ಪೋಲಿಸರು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಸ್ಥಳದಲ್ಲಿಯೇ ಪಂಚನಾಮೆಯನ್ನು ಓದಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ಸಂಗತಿಗಳು ನಿಜವಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.
Sd/-
ಪ್ರ ದ ನ್ಯಾದಂ ಹೊನ್ನಾವರ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.

ಸಿಸಿ ನಂಃ 894/2020

ಪಿ ಡಬ್ಲುಃ 02

ಸಿ ಡಬ್ಲುಃ 03

| | |
|---|---|
| ಸಾಕ್ಷಿದಾರರ ಹೆಸರು | ಮಾದೇವ ನಾಯ್ಕ |
| ತಂದೆಯ ಹೆಸರು | ನಾರಾಯಣ ನಾಯ್ಕ |
| ವಯಸ್ಸು | 56 |
| ಉದ್ಯೋಗ | ವ್ಯಾಪಾರ |
| ವಾಸ್ತವ್ಯ | ಮಂಕಿ |

ಸಾಕ್ಷಿಯನ್ನು ದಿನಾಂಕಃ 05-07-2023 ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ಸಾಕ್ಷಿಗೆ ನಿಪಿ. 1ರ ಪಂಚನಾಮೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ. 1 ಬಿ ಎಂದು ಗುರುತಿಸಲಾಯಿತು. ಸದ್ರಿ ದಾಖಲೆಗೆ ನಾನು ನಾಲ್ಕು ಐದು ವರ್ಷಗಳ ಹಿಂದೆ ಹೊನ್ನಾವರ ಬಸ್ ನಿಲ್ದಾಣದ ಹತ್ತಿರ ಇರುವ ನನ್ನ ಅಂಗಡಿಗೆ ಪೋಲಿಸರು ಬಂದು ಕೇಳಿಕೊಂಡಾಗ ನಾನು ಸಹಿ ಮಾಡಿರುತ್ತೇನೆ. ನನ ಜೊತೆ ಸದ್ರಿ ದಾಖಲೆಗೆ ಬೇರೆ ಯಾರೂ ಸಹಿ ಮಾಡಿರುವುದಿಲ್ಲ. ಸದ್ರಿ ದಾಖಲೆಯಲ್ಲಿ ಏನು ಬರೆದಿದ್ದಾರೆ ಮತ್ತು ಯಾವ ಕಾರಣಕ್ಕಾಗಿ ನನ್ನ ಸಹಿ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಕಡತದಲ್ಲಿರುವ ಬಿಳಿ ಹಾಳೆಯಲಿ ಪ್ರಿಂಟ್ ತೆಗೆದಿರುವ ಫೊಟೋಗಳನ್ನು ತೋರಿಸಲಾಗಿ ಅದನ್ನು ನುಡಿ ಗುರುತಿಸುತ್ತಾರೆ. ಸದರಿ ಫೋಟೊಗಳನ್ನು ಹಾಳೆಯಲ್ಲಿ ಪ್ರಿಂಟ ತೆಗೆದ ಕಾರಣ ಅದನ್ನು ಗುರುತಿಸಲು ನ್ಯಾಯಾಲಯ ನಿರಾಕರಿಸಿರುತ್ತದೆ. ಸದ್ರಿ ಮಹಜರಿನಲ್ಲಿ ಏನು ಬರೆದಿರುತ್ತಾರೆ ಮತ್ತು ಯಾವ ಕಾರಣಕ್ಕಾಗಿ ನನ್ನ ಸಹಿ ಪಡೆದ್ದಾರೆ ಗೊತ್ತಿಲ್ಲ. ಘಟನಾ ಸ್ಥಳವನ್ನು ಯಾರು ತೋರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ವಸ್ತುಗಳನ್ನು ಮತ್ತು ಯಾವದೇ ವಾಹನಗಳನ್ನು ವಶಪಡಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲುಃ ಎ ಪಿ ಪಿ ಯವರಿಂದಃ**

ದಿಃ 07.12.2017 ರಂದು ಹೊನ್ನಾವರ ಪಟ್ಟಣದ ಗುಡ್ ಲಕ್ ಹೊಟೆಲ್ ಎದುರುಗಡೆ ಪೊಲೀಸರು ಸ್ಥಳ ಪಂಚನಾಮೆಗಾಗಿ ಬಂದಾಗ ನಾನು ಮತ್ತು ಚಾಸಾ 2 ರವರು ಸದ್ರಿ ದಾಖಲೆಗೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆಗ ಚಾಸಾ 1 ರವರು ಪೋಲಿಸರಿಗೆ ಘಟನಾ ಸ್ಥಳ ತೋರಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಸ್ಥಳದಿಂದ ಪೋಲಿಸರು 10 ಕಲ್ಲುಗಳು, 5 ಬಾಟಲಿಗಳು, 5 ಕಬ್ಬಿಣದ ರಾಡುಗಳು, 10 ಕಟ್ಟಿಗೆ ಬಡಿಗೆಗಳನ್ನು ಪೋಲಿಸರು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಪೋಲಿಸರು ಅನೇಕ ಬೈಕುಗಳನ್ನು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ತನಿಖೆ ಸಲುವಾಗಿ ಅವೆಲ್ಲ ವಸ್ತುಗಳನ್ನು ನನ್ನ ಮತ್ತು ಚಾಸಾ 2 ರವರ ಸಮಕ್ಷಮ ಪೋಲಿಸರು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಒಂದು ರಿಕ್ಷಾ ಇತ್ತು. ಆ ಸಮಯದಲ್ಲಿ ಸ್ಥಳದಲ್ಲಿಯೇ ಪಂಚನಾಮೆಯನ್ನು ಓದಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ಸಂಗತಿಗಳು ನಿಜವಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.
Sd/-
ಪ್ರ ದ ನ್ಯಾದಂ ಹೊನ್ನಾವರ.